155 ನೇ 6 ನಿ-72 (130)
4KN
29/03

## ಮಾನ್ಯ ವಿಧಾನ ಪರಿಷತ್ ಸದಸ್ಯರಾದ ಶ್ರೀ ಯತೀಂದ್ರ ಎಸ್. ಇವರು ನಿಯಮ 72 ರಡಿ ಮಂಡಿಸಿರುವ ಸೂಚನೆಗೆ ಉತ್ತರ.

*****

**ವಿಷಯ**: ಕೆಐಎಡಿಬಿ ಯಿಂದ ಕೈಗಾರಿಕಾ ಉದ್ದೇಶಕ್ಕೆ ರೈತರ ಭೂಮಿಯನ್ನು ಭೂಸ್ವಾಧೀನಪಡಿಸಿಕೊಳ್ಳುತ್ತಿದ್ದು, ಕಳೆದ 10 ವರ್ಷಗಳಲ್ಲಿ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳಲಾಗಿದ್ದು ಹಂಚಿಕೆ ಮಾಡಿದ ಜಮೀನುಗಳನ್ನು ನಿಗಧಿತ ಉದ್ದೇಶಕ್ಕೆ 02 ವರ್ಷದೊಳಗೆ ಕಾರ್ಯಗತಗೊಳಿಸಬೇಕಿದ್ದು, 03 ವರ್ಷದವರೆಗೆ ವಿಸ್ತರಣೆಗೆ ಅವಕಾಶವಿದ್ದು, ಒಟ್ಟಾರೆ 05 ವರ್ಷಗಳೊಳಗೆ ನಿಗಧಿತ ಉದ್ದೇಶಕ್ಕೆ ಉಪಯೋಗಿಸಲೇಬೇಕಿರುತ್ತದೆ. ಆದರೆ ಹಲವು ಪ್ರಕರಣಗಳಲ್ಲಿ ಜಮೀನು ಮಂಜೂರಾಗಿ 10 ರಿಂದ 12ನೇ ವರ್ಷಗಳು ಕಳೆದರೂ ಸಹ ಹಂಚಿಕೆ ಮಾಡಿದ ಉದ್ದೇಶ ಅನುಷ್ಠಾನಗೊಳ್ಳದಿರುವ ಅಂತಹ ಪ್ರಕರಣಗಳು ಹಾಗೂ ಈವರೆಗೆ ಕೆಐಎಡಿಬಿಗೆ ವಿಳಂಬವಾದ ಪ್ರಕರಣಗಳಿಂದ ಭೂಮಿ ಕಳೆದುಕೊಂಡ ರೈತರು/ಕುಟುಂಬದವರಿಗೆ ಉದ್ಯೋಗವಿಲ್ಲದೆ ಪರ್ಯಾಯ ವ್ಯವಸ್ಥೆ ಇಲ್ಲದೆ ತೊಂದರೆಯಾಗಿದ್ದು ಜಮೀನು ಕಳೆದುಕೊಂಡ ರೈತರು/ಕುಟುಂಬದವರಿಗೆ ಈವರೆಗೆ ಉದ್ಯೋಗ ಸಿಗದೆ ವಯೋಮಿತಿ ಮೀರುತ್ತಿರುವ ಪ್ರಕರಣಗಳಲ್ಲಿ ಉದ್ಯೋಗ ಕಲ್ಪಿಸುವ ಬಗ್ಗೆ ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಹಾಗೂ ಮೂಲಸೌಲಭ್ಯ ಅಭಿವೃದ್ಧಿ ಸಚಿವರನ್ನು ಗಮನ ಸೆಳೆಯಬಯಸುತ್ತೇನೆ.

**ಉತ್ತರ**:

ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ ವತಿಯಿಂದ ಕಳೆದ 10 ವರ್ಷಗಳಲ್ಲಿ ಕೈಗಾರಿಕಾ ಪ್ರದೇಶಗಳಿಗಾಗಿ ಒಟ್ಟು 31516-30 ಎಕರೆ ಜಮೀನನ್ನು ಸ್ವಾಧೀನ ಪಡಿಸಿಕೊಳ್ಳಲಾಗಿರುತ್ತದೆ. ಮಂಡಳಿಯಿಂದ ಕಳೆದ 10 ವರ್ಷಗಳಿಂದ ಕೈಗಾರಿಕಾ ಪ್ರದೇಶಗಳಲ್ಲಿ ಒಟ್ಟಾರೆ 6612 ಉದ್ದಿಮೆದಾರರಿಗೆ ಒಟ್ಟಾರೆ 10338.72 ಎಕರೆ ವಿಸ್ತೀರ್ಣದ ಜಮೀನನ್ನು ಹಂಚಿಕೆ ಮಾಡಲಾಗಿರುತ್ತದೆ.

ಮಂಡಳಿಯ ಹಂಚಿಕೆ ನಿಯಮಾವಳಿಗಳನ್ವಯ ಉದ್ದಿಮೆದಾರರು ಜಮೀನು ಹಂಚಿಕೆ ಮತ್ತು ಸ್ವಾಧೀನ ಪಡೆದು ಗುತ್ತಿಗೆ ಮತ್ತು ಮಾರಾಟ ಕರಾರು ಪತ್ರ ನೆರವೇರಿಸಿದ ದಿನಾಂಕದಿಂದ 03 ವರ್ಷಗಳ (ಎಂ.ಎಸ್.ಎಂ.ಇ ಮತ್ತು ಬೃಹತ್ ಯೋಜನೆಗಳು) ಮತ್ತು 5 ವರ್ಷಗಳ (ಮೆಗಾ, ಅಲ್ಟ್ರಾ ಮೆಗಾ ಮತ್ತು ಸೂಪರ್ ಮೆಗಾ ಯೋಜನೆಗಳು) ಕಾಲಾವಕಾಶ ಇರುತ್ತದೆ. ಅಲ್ಲದೇ ಯೋಜನೆ ಅನುಷ್ಠಾನಗೊಳಿಸಲು ಹೆಚ್ಚುವರಿ 01 ವರ್ಷ ಕಾಲಾವಕಾಶವನ್ನು ಶೇ.2 ರಷ್ಟು ದಂಡ ಪಾವತಿಸಿ ಹಾಗೂ ಮತ್ತೊಂದು ವರ್ಷ ಕಾಲಾವಕಾಶವನ್ನು ಶೇ.5 ರಷ್ಟು ದಂಡ ಪಾವತಿಸಿ ಪಡೆಯಲು ಅವಕಾಶ ಕಲ್ಪಿಸಲಾಗಿರುತ್ತದೆ.

ಮಂಡಳಿಯ ಹೊಸ ಕೈಗಾರಿಕಾ ಪ್ರದೇಶಗಳಲ್ಲಿ ಹಂಚಿಕೆಯಾದ ನಂತರ ಪ್ರಾರಂಭದಲ್ಲಿ ಭೂಸ್ವಾಧೀನಕ್ಕೆ ಸಂಬಂಧಿಸಿದ ಸಮಸ್ಯೆಗಳು, ಮೂಲಭೂತ ಸೌಕರ್ಯಕ್ಕೆ ಸಂಬಂಧಿಸಿದಂತೆ ಇತ್ಯಾದಿ ಕಾರಣಗಳಿಂದ ಹಂಚಿಕೆದಾರರು ಯೋಜನೆ ಅನುಷ್ಠಾನಗೊಳಿಸಲು ವಿಳಂಬವಾಗಿರುತ್ತದೆ.

ಆದಾಗ್ಯೂ ತಕರಾರು ರಹಿತ ನಿವೇಶನಗಳಲ್ಲಿ ಮಂಡಳಿಯ ಹಂಚಿಕೆ ನಿಯಮಾವಳಿಗಳನ್ವಯ ಜಮೀನು ಹಂಚಿಕೆ ಪಡೆದ ಉದ್ದಿಮೆದಾರರು ಗುತ್ತಿಗೆ ಮತ್ತು ಮಾರಾಟ ಕರಾರು ಪತ್ರದನ್ವಯ ನಿಗಧಿತ ಅವಧಿಯೊಳಗೆ ಯೋಜನೆ ಅನುಷ್ಠಾನಗೊಳಿಸದ ಪಕ್ಷದಲ್ಲಿ ಕೆಐಎಡಿ ಕಾಯ್ದೆ ಕಲಂ 34-ಬಿ ರಡಿ ನೋಟಿಸ್ ನೀಡಿ ಜಮೀನು ಹಿಂಪಡೆಯಲು ಕ್ರಮ ಕೈಗೊಳ್ಳಲಾಗುತ್ತಿದೆ. ಕಳೆದ ಹತ್ತು ವರ್ಷಗಳ ಅವಧಿಯಲ್ಲಿ ಮಂಡಳಿಯ ನಿಯಮಾನುಸಾರ ಯೋಜನೆ ಅನುಷ್ಠಾನದ ಪ್ರಕರಣಗಳಲ್ಲಿ ಒಟ್ಟು 1077 ಉದ್ದಿಮೆದಾರರಿಗೆ ಕೆಐಎಡಿ ಕಾಯ್ದೆ ಕಲಂ 34-ಬಿ ರಡಿ ನೋಟಿಸ್ ನೀಡಲಾಗಿರುತ್ತದೆ. ಹಾಗೂ 943.78 ಎಕರೆ ಜಮೀನನ್ನು ಹಿಂಪಡೆಯಲಾಗಿರುತ್ತದೆ.

•

ಮಂಡಳಿಯು ಹಂಚಿಕೆದಾರರೊಂದಿಗೆ ನೆರವೇರಿಸುತ್ತಿರುವ ಗುತ್ತಿಗೆ ಮತ್ತು ಮಾರಾಟ ಕರಾರು ಪತ್ರದಲ್ಲಿ ಸರ್ಕಾರದ ಕೈಗಾರಿಕಾ ನೀತಿ ಅನುಸಾರ ಉದ್ಯೋಗವಕಾಶ ಕಲ್ಪಿಸಬೇಕೆಂಬ ಷರತ್ತನ್ನು ವಿಧಿಸಲಾಗಿದೆ. ಅಲ್ಲದೇ, ಜಮೀನು ಕಳೆದುಕೊಂಡ ಕುಟುಂಬದ ಕನಿಷ್ಟ ಒಬ್ಬ ಸದಸ್ಯನಿಗೆ ಉದ್ಯೋಗವಕಾಶ ಕಲ್ಪಿಸಲು ಷರತ್ತು ವಿಧಿಸಲಾಗುತ್ತದೆ.

**ಕಡತ ಸಂಖ್ಯೆ: ಸಿಐ 209 ಐಎಪಿ 2025**

**(ಎಂ.ಬಿ. ಪಾಟೀಲ)**
ಬೃಹತ್ ಮತ್ತು ಮಧ್ಯಮ ಕೈಗಾರಿಕೆ
ಹಾಗೂ ಮೂಲಸೌಲಭ್ಯ ಅಭಿವೃದ್ಧಿ ಸಚಿವರು